## ಪ್ರಬಂಧ

ದೊಡ್ಡಪ್ಪ ಮುಂತಾದ ಯಜಮಾನಿಕೆಯ ಗಂಡಸರೂ ಕೂಡ ಅವರಿಗರಿವಿಲ್ಲದೇ ಭಜನೆಯ ಲಯದೊಂದಿಗೆ ಮನಸ್ಸನ್ನು ತೇಲಿಬಿಟ್ಟು ಹಗುರಾಗುತ್ತ ಹಗಲು ಭೂತದಂತೆ ಕಂಡಿದ್ದ ತಾಪತ್ರಯವೀಗ ನಿಭಾಯಿಸಬಲ್ಲ ವಿಷಯವೆಂಬ ತೀರ್ಮಾನಕ್ಕೆ ಬಂದಿರುತ್ತಿದ್ದರು. ಅಡುಗೆಮನೆಯಲ್ಲಿ ಅನ್ನ ಬಾಗಿಸುತ್ತ, ಅಕ್ಕಿ ರುಬ್ಬುತ್ತ, ರಾತ್ರಿ ಗೊಜ್ಜಿಗೆ ಮೆಣಸು ಹುರಿಯುತ್ತ ಓಡಾಡುವ ಅತ್ತೆ, ಚಿಕ್ಕಿಯರು ಬಾಯಲ್ಲಿ ಹಾಡಿನ ಸಾಲುಗಳನ್ನು ಹೇಳಿಕೊಳ್ಳುತ್ತಲೇ ಇರುವುದರಿಂದ ಅವರ ಕೆಲಸವೂ ಭಜನೆಯ ಲಯದಲ್ಲಿಯೇ ಸಾಗುತ್ತಿತ್ತು. ಪಟ್ಟಣಕ್ಕೆ ಹೋಗಿ ಸಂಜೆ ಬಸ್ಸಿಗೆ ಮರಳುತ್ತಿರುವವರನ್ನು ಪ್ರತಿ ಮನೆಯ ಭಜನೆಯೇ ಎದುರುಗೊಳ್ಳುವುದು. ಅಡವಿ ಮೇಯ್ದ ಜಾನುವಾರಗಳು ಹೊಳೆಯಂಚಲ್ಲಿ ನೀರು ಕುಡಿದು ಮನೆ ಸೇರಿದ ಮೇಲೆ ನಿರ್ಜನ ದಂಡೆಯ ಕಲ್ಲುಗಳೊಂದಿಗೆ ಲಲ್ಲೆಗರೆಯಲು ಬರುವ ಅಲೆಗಳು ದೇವಳದ ಭಜನೆಯಾರತಿಯ ಘಂಟಾನಾದಕ್ಕೆ ಮುದಗೊಂಡು ಹಿತವಾಗಿ ಕುಣಿಯುತ್ತಿದ್ದವು.

ಮುಗಿಲ ಮಾರಿಗೆ ರಾಗರತಿಯ ನಂಜ ಏರಿತ್ತ
ಆಗ ಸಂಜೆ ಆಗಿತ್ತ
ನೆಲದ ಅಂಚಿಗೆ ಮಂಜಿನ ಮುಸುಕು ಹ್ಯಾಂಗೊ ಬಿದ್ದಿತ್ತ
ಗಾಳಿಗೆ ಮೇಲಕ್ಕೆದ್ದಿತ್ತ
ಬಿದಿಗಿ ಚಂದ್ರನ ಚೊಗಚಿ ನಗಿ ಹೂ
ಮೆಲ್ಲಗೆ ಮೂಡಿತ್ತ
ಮ್ಯಾಲಕ ಬೆಳ್ಳಿನ ಕೂಡಿತ್ತ
ಇರುಳ ಹೆರಳಿನಾ ಅರಳಮಲ್ಲಿಗಿ ಜಾಳಿಗಿ ಹಾಂಗಿತ್ತ
ಸೂಸ್ಯಾವ ಚಿಕ್ಕಿ ಅತ್ತಿತ್ತ

ಅಂತ ಬೇಂದ್ರೆಯವರು ಪರವಶರಾಗಿ ಹಾಡಿದ್ದು ಇದೇ ಸಂಜೆಯ ಸೊಬಗಿಗೆ ಮನಸೋತೇ ಅಲ್ಲವೆ?

ಸಂಜೆಯಾಗುತ್ತಿದ್ದಂತೆ ಒಂದು ಬಗೆಯ ರಾಗರತಿಯ ಭಾವ ಮೂಡಿ ಮನಸ್ಸು ಹದ ಮೀರಿ ವರ್ತಿಸುವ ಅನುಭವ ಬಹುತೇಕರಿಗೆ ಆಗಿರಲೇಬೇಕು. ಹಿಂದಿ ಚಲನಚಿತ್ರಗೀತೆಯೊಂದು ಇದಕ್ಕೆ ಪುರಾವೆ ನೀಡುತ್ತದೆ. 'ಏ ಶಾಮ್ ಮಸ್ತಾನಿ ಮದಹೋಶ್ ಕಿಯೆಜಾಯ್ ಮುಝೆ ದೂರ್ ಕೋಯಿ ಖೀಚೆ

